ಸಾಕ್ಷಿಯನ್ನು ದಿನಾಂಕ **21-06-2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ., ವಕೀಲರಿಂದ:**

ನನಗೆ ಮರಣೋತ್ತರ ಪರೀಕ್ಷೆ ಮಾಡಿ ಮತ್ತು ದೇಹದಲ್ಲಿ ಇರುವ ಗುಂಡುಗಳನ್ನು ತೆಗೆದು ಅಭ್ಯಾಸ ಇದೆ. 5 ರಿಂದ 6 ಅಡಿ ಅಂತರದಲ್ಲಿ ನೇರವಾಗಿ ಗುಂಡು ಹೊಡೆದರೆ ಸದರಿ ಗುಂಡು ಹಿಂಬದಿಯಿಂದ ಬರುತ್ತದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಎಡ ಎದೆಯಲ್ಲಿ ಓರೆಯಾಗಿ ಗುಂಡು ಇತ್ತು. ನಾನು ಒಟ್ಟು 6 pellets ಗಳನ್ನು ತೆಗೆದಿದ್ದೇನೆ. C.T scan ನ ಸಂದರ್ಭದಲ್ಲಿ multiple pellets ದೇಹದಲ್ಲಿ ಇದೆ ಎಂದು ವರದಿ ನೀಡಿದ್ದರು ಆದರೆ ನಿರ್ದಿಷ್ಟವಾಗಿ ಎಷ್ಟು ಇತ್ತು ಎಂದು ಹೇಳಿಲ್ಲ. ಸದರಿ pellets ಇದ್ದ ಭಾಗ 1 ಸೆಂ.ಮೀ ನಷ್ಟು ಆಳದಲ್ಲಿ ಇತ್ತು. ಸದರಿ ಗಾಯಗಳ ಅಳತೆಯನ್ನು ನಾನು ಬರೆದಿಲ್ಲ. ಸದರಿ pellets ಗಳು ಚರ್ಮದ ಕೆಳಗೆ ಕೊಬ್ಬಿನಲ್ಲಿ ಇತ್ತು. ಚರ್ಮದ ಕೆಳಗಿನ ಕೊಬ್ಬು ಎಂದರೆ 2 ಸೆಂ.ಮೀಟರ್ ವರೆಗೂ ಇರಬಹುದು. Exit wound ಬರಬೇಕಾದರೆ ಕೊನೆಯ ಪಕ್ಷ 6 ರಿಂದ 7 ಇಂಚು ದಾಟಬೇಕು. ನಾನು ನೋಡಿದ ಈ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ